ಹೇಳಿದರು. ಮಾನ್ಯ ಅಧ್ಯಕ್ಷರೇ ತಮ್ಮ ಮುಖಾಂತರ ನಾನು ಮಾನ್ಯ ಸದಸ್ಯರ ಗಮನಕ್ಕೆ ತರುವುದೇನೆಂದರೆ ನಮ್ಮ ಅನೇಕ ಇಲಾಖೆಗಳು ಬೇರೆ ಬೇರೆ ಬ್ಯಾಂಕುಗಳಾದ ವರ್ಲ್ಡ್ ಬ್ಯಾಂಕ್, ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ಮೂಲಕ ಲೋನ್ ತೆಗೆದುಕೊಳ್ಳುತ್ತೇವೆ. ನಾವು ಆ ರೀತಿ ಸಾಲ ಮಾಡಿಕೊಳ್ಳುತ್ತ ಹೋದರೆ ನಮಗೆ ಲೋನ್ ಹಿಂತಿರುಗಿ ಬರುವುದು ಕಷ್ಟವಾಗುತ್ತದೆ. ಇದೊಂದು ಸ್ಕೀಮ್ ಅಲ್ಲ, ನಾವು ಅನೇಕ ವಿಚಾರಗಳಲ್ಲಿ ಸಾಲ ಎಲ್ಲಾ ಮನ್ನಾ ಮಾಡಿಕೊಳ್ಳುತ್ತಾ ಹೋದರೆ ಬೇರೆ ಬೇರೆ ಸಂಸ್ಥೆಯಿಂದ ಬರುವಂತಹ ಲೋನ್‌ಗಳಿಗೆ ತೊಂದರೆಯಾಗುತ್ತದೆ. ಅದಕ್ಕೆ ತಾವೇನು ಗಂಭೀರವಾದ ವಿಷಯವನ್ನು ಎತ್ತಿದ್ದೀರಿ, ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆಂದು ಹೇಳಿ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಜಮಖಂಡಿ ನಗರಸಭೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ವಿತರಣೆ ಬಗ್ಗೆ :

20 (115) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್ (ಜಮಖಂಡಿ) : ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ನಗರಸಭೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ವಿತರಣೆ ವ್ಯವಸ್ಥೆ ದೋಷ ಪೂರ್ಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ವಿತರಣೆಯ ದೋಷ ಸರಿಪಡಿಸಲು ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆಯೇ;

ಇ) ಹಾಗಿದ್ದಲ್ಲಿ, ಎಷ್ಟು ಹಣ ಮೀಸಲಿರಿಸಿದೆ?

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

ಅ) ಹೌದು. ಜಮಖಂಡಿ ಪಟ್ಟಣದಲ್ಲಿ ಹಾಲೀ ಇರುವ ನೀರು ಸರಬರಾಜು ವಿತರಣಾ ವ್ಯವಸ್ಥೆಯು 1979–80ರಲ್ಲಿ ಅಳವಡಿಸಲಾಗಿದ್ದು ಇದನ್ನು 40000 ಜನಸಂಖ್ಯೆಗೆ ತಲಾ ದಿನಂಪ್ರತಿ 70 ಲೀಟರ್ ನೀರಿನ ಬೇಡಿಕೆಯನ್ನು ಪರಿಗಣಿಸಿ ವಿನ್ಯಾಸಗೊಳಿಸಲಾಗಿತ್ತು. ಈ ವಿತರಣಾ ಜಾಲದಲ್ಲಿ ಅಳವಡಿಸಿರುವ ಸಿ.ಐ., (CI) ಹಾಗೂ ಪಿ.ವಿ.ಸಿ., (PVC) ಕೊಳವೆಗಳು 30

ವರ್ಷ ಹಳೆಯದಾಗಿರುವುದರಿಂದ ಶಿಥಿಲಗೊಂಡಿರುತ್ತವೆ ಹಾಗೂ ನೀರಿನ ಸೋರಿಕೆ ಉಂಟಾಗುತ್ತಿದೆ. ಬೆಳೆಯುತ್ತಿರುವ ಪಟ್ಟಣದ ಈಗಿನ 70000 ಜನಸಂಖ್ಯೆಗೆ ಅವಶ್ಯವಿರುವ ಹೆಚ್ಚುವರಿ ನೀರನ್ನು ಸಮರ್ಪಕವಾಗಿ ಸರಬರಾಜು ಮಾಡಲು ಸಾಧ್ಯವಾಗುವುದಿಲ್ಲ.

ಆ) ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಅವಕಾಶ ಕಲ್ಪಿಸಲಾಗಿಲ್ಲ.

ಇ) ಜಮಖಂಡಿ ನಗರದ ನೀರು ಸರಬರಾಜು ವಿತರಣಾ ಕೊಳವೆ ಮಾರ್ಗದ ನವೀಕರಣಕ್ಕಾಗಿ (Remodelling) ಈ ಯೋಜನೆಯ ಸರ್ವೆಕ್ಷಣ, ವಿನ್ಯಾಸ ಹಾಗೂ ಅಂದಾಜು ಪತ್ರಿಕೆ ತಯಾರಿಸಲಾಗಿದ್ದು, ಅಂದಾಜು ಮೊತ್ತ ರೂ.1500.00 ಲಕ್ಷಗಳ ವೆಚ್ಚಗಳಾಗಬಹುದೆಂದು, ಮತ್ತು ಯೋಜನೆಯ ಅಂದಾಜು ಮೊತ್ತದ ಮೂರನೇ ಒಂದು ಭಾಗದಷ್ಟು ಮೊತ್ತವನ್ನು 2010--11ನೇ ಸಾಲಿನ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕ್ರಿಯಾ ಯೋಜನೆಯಲ್ಲಿ ಅನುವು ಮಾಡಲಾಗುವುದು.

ಶ್ರೀ ಶ್ರೀಕಾಂತ್ ಕುಲಕರ್ಣಿ : ಮಾನ್ಯ ಅಧ್ಯಕ್ಷರೇ, ಜಮಖಂಡಿ ನಗರದಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗಿದೆ. ಇದಕ್ಕೆ ಕಾರಣವೇನೆಂದರೆ ಹಿಪ್ಪರಗಿ ಮತ್ತು ಕೃಷ್ಣ ನದಿಯಿಂದ ಕುಡಿಯುವ ನೀರಿನ ಯೋಜನೆ ಒಂದು ವರ್ಷದಿಂದ ಚೆನ್ನಾಗಿ ಕೆಲಸ ಮಾಡುತ್ತಿತ್ತು, ಸಾಕಷ್ಟು ನೀರು ಬರುತ್ತಿತ್ತು. ಆದರೆ ಅಲ್ಲಿಂದ ಬರುತ್ತಿದ್ದಂತಹ ನೀರನ್ನು ನಗರದ ತುಂಬಾ ವಿತರಣೆ ಮಾಡುವಂತಹ ವ್ಯವಸ್ಥೆ ಸರಿಯಾಗಿಲ್ಲ. ಇಡೀ ಕರ್ನಾಟಕ ರಾಜ್ಯದಲ್ಲಿ 1928ನೇ ಇಸವಿಯಲ್ಲಿ ಜಮಖಂಡಿಯಲ್ಲಿ ಮೊಟ್ಟಮೊದಲ ಬಾರಿಗೆ ಈ ರೀತಿ ಕುಡಿಯುವ ನೀರಿಗೆ ಯೋಜನೆಯನ್ನು ಮಾಡಿದಂತಹ ನಗರವಾಗಿದೆ. ಆ ವರ್ಷಗಳಲ್ಲಿ ಜನಸಂಖ್ಯೆ ಏನಿತ್ತು ಅದರ ಹತ್ತು ಪಟ್ಟು ಸುಮಾರು 70 ರಿಂದ 80 ಸಾವಿರದಷ್ಟು ಜನಸಂಖ್ಯೆ ಜಾಸ್ತಿಯಾಗಿದೆ. ಈ ಕುಡಿಯುವ ನೀರಿನ ಯೋಜನೆಗೆ ಬಳಸಲಾದಂತಹ CI pipe ಗಳು ಬಹಳ ವರ್ಷಗಳಾಗಿರುವು ದರಿಂದ ತುಕ್ಕು ಹಿಡಿದು, ನೀರು ಪೈಪ್ ಒಳಗೆ ಹರಿಯುವುದಕ್ಕೆ ಸ್ಥಳ ಇಲ್ಲದಿರುವ ಕಾರಣ ಅಳತೆ ಕಡಿಮೆಯಾಗಿ ನೀರಿನ ಅವ್ಯವಸ್ಥೆಯಾಗಿದೆ. ಆದುದರಿಂದ ಅದನ್ನು ಸರಿಮಾಡುವ ದೃಷ್ಟಿಯಿಂದ ಒಂದು ಹೊಸ ವ್ಯವಸ್ಥೆಯನ್ನು ಜಾರಿಗೆ ತರಬೇಕಾಗುತ್ತದೆ. ಇವತ್ತು ಹತ್ತಾರು ಹಳ್ಳಿಗಳು ಮುಳುಗಡೆಯಾಗಿದ್ದರಿಂದ ಅಲ್ಲಿಂದ ಜನ ಜಮಖಂಡಿಗೆ ಬಂದು ವಸತಿ ಮಾಡಿರುವುದರಿಂದ, ಜನಸಂಖ್ಯೆ ಜಾಸ್ತಿಯಾಗಿದೆ ಮತ್ತು ಹೊಸ ಹೊಸ

ಬಡಾವಣೆಗಳಿಗೂ ನೀರಿನ ವ್ಯವಸ್ಥೆ ಇಲ್ಲ. ಕೃಷ್ಣ ನದಿಯಿಂದ ಬಂದಿರುವಂತಹ ನೀರನ್ನು ಸರಿಯಾಗಿ ವಿತರಣೆ ಮಾಡುವಂತಹ ವ್ಯವಸ್ಥೆಯಾದರೆ ಮಾತ್ರ ಈ ಕುಡಿಯುವ ನೀರಿನ ಸಮಸ್ಯೆಗೆ ನಾವು ಸರಿಯಾಗಿ ಸ್ಪಂದನೆ ಮಾಡಿದ ಹಾಗೆ ಆಗುತ್ತದೆ.

ಆ ದೃಷ್ಟಿಯಿಂದ 1979–80ನೇ ಇಸವಿಯಲ್ಲಿ ನಗರದ ಜನಸಂಖ್ಯೆ 40,000 ಇತ್ತು. ಮಾನ್ಯ ಸಚಿವರು ಉತ್ತರದಲ್ಲಿ ಹೇಳಿರುವಂತೆ 1979–80ರಲ್ಲಿ ಸ್ವಲ್ಪಮಟ್ಟಿಗೆ ಹೊಸ ಪೈಪ್ ಹಾಕುವ ವ್ಯವಸ್ಥೆ ಆಗಿದೆ. ಆದರೆ ಇವತ್ತು ಬೆಳೆದಿರುವ ಜನಸಂಖ್ಯೆಗೆ ನೀರನ್ನು ಸರಿಯಾದ ರೀತಿಯಲ್ಲಿ ಕೊಡುವುದಕ್ಕೆ ಆಗುವುದಿಲ್ಲ. ಆದುದರಿಂದ ಇದಕ್ಕೆ ಹೊಸದಾಗಿ ಬೇಕಾಗುವಂಥ ವ್ಯವಸ್ಥೆಯನ್ನು ಮಾಡಿ, ನೀರಿನ ವಿತರಣೆ ಪ್ರತಿ ಬಡಾವಣೆಗಳಿಗೂ ಆಗುವ ಹಾಗೆ ಮಾಡಿ, ಎಲ್ಲಾ ಕಡೆಗಳಿಗೂ ನೀರನ್ನು ಕೊಡುವ ವ್ಯವಸ್ಥೆ ಮಾಡಬೇಕು ಅಂದರೆ ಹೊಸದಾಗಿ ಅಂದಾಜು ಪಟ್ಟಿಯನ್ನು ತಯಾರಿಸಿ ಇದೇ ವರ್ಷದಲ್ಲಿ ಅದಕ್ಕೆ ಬೇಕಾಗುವ ಅನುದಾನವನ್ನು ಇದೇ ವರ್ಷದ ಬಜೆಟ್‌ನಲ್ಲಿಟ್ಟರೆ ನಮ್ಮ ಸಾರ್ವಜನಿಕರ ಸಮಸ್ಯೆಗೆ ಪರಿಹಾರ ಕೊಡುವುದಕ್ಕೆ ಆಗುತ್ತದೆ. ಅದನ್ನು ಇದೇ ವರ್ಷದಲ್ಲಿ ಕೊಡುವುದಕ್ಕೆ ಸಾಧ್ಯ ಆಗುತ್ತದೆಯೇ ಎನ್ನುವ ಮಾತನ್ನು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಹೇಳಿದ್ದರು. ಅದನ್ನು ಬಹಳ ಸ್ಪಷ್ಟವಾಗಿ ಉತ್ತರದಲ್ಲಿ ತಿಳಿಸಿದ್ದೇವೆ. ಈಗ ಮಾನ್ಯ ಸದಸ್ಯರು ಹೇಳಿದ ಹಾಗೆ piped water supply ಏನಿದೆ, ಅದು ಇವತ್ತು ಸಮಸ್ಯೆ ಇಲ್ಲದೆಯೇ ಆಗಿದೆ. ಕಳೆದ ವರ್ಷ ಹಿಪ್ಪರಗಿ ಬ್ಯಾರೇಜ್‌ನ 2ನೇ ಹಂತದ ನೀರು ಸರಬರಾಜು ಯೋಜನೆಯನ್ನು 11 ಕೋಟಿ 84 ಲಕ್ಷ ರೂಪಾಯಿಗಳಿಗೆ ನಾವು ಸಂಪೂರ್ಣಗೊಳಿಸಿದ್ದೇವೆ. ಇವತ್ತು ಜಮಖಂಡಿ ನಗರಕ್ಕೆ Bulk Water Supply ಗೆ ಏನು ಸಮಸ್ಯೆ ಇಲ್ಲ. ಮಾನ್ಯ ಸದಸ್ಯರು ತಿಳಿಸಿರುವ ಹಾಗೆ ಒಳಗಡೆ distribution network ಏನು ಇದೆ. ಅದು ಬಹಳ ಹಳೆಯದಾಗಿರುವುದರಿಂದ ಅಲ್ಲಿ ಸಮರ್ಪಕವಾಗಿ ನೀರನ್ನು ಕೊಡುವುದಕ್ಕೆ ಆಗುತ್ತಿಲ್ಲವೆಂಬುದು ನಿಜ. ಅದಕ್ಕೋಸ್ಕರ 2010–2011ನೇ ಸಾಲಿಗೆ ಸುಮಾರು 15 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಮ್ಮ Urban Water Supply ಮಂಡಳಿ ಅವರು ಯೋಜನೆಯನ್ನು ತಯಾರಿಸುತ್ತಿದ್ದು,

2010–2011ನೇ ಕ್ರಿಯಾ ಯೋಜನೆಯಲ್ಲಿ ಇದನ್ನು ತೆಗೆದುಕೊಳ್ಳುತ್ತೇವೆಂದು ಹೇಳಲಿಚ್ಚಿಸುತ್ತೇನೆ.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಸರ್ಕಾರ 16 ಪಟ್ಟಣಗಳಿಗೆ 24 x 7 ಎನ್ನುವ scheme ಅಡಿಯಲ್ಲಿ ವಾರದಲ್ಲಿ 7 ದಿವಸಗಳು, ಒಂದು ದಿವಸದಲ್ಲಿ 24 ಗಂಟೆಗಳು ನೀರು ಕೊಡುವ ವ್ಯವಸ್ಥೆಯನ್ನು ಜಾರಿಗೆ ತಂದಿದ್ದಾರೆ. ಅದರಲ್ಲಿ ಬಿಜಾಪುರ ನಗರವೂ ಸಹ ಸೇರಿದೆ. ಈ 16 ನಗರಗಳ ಜೊತೆಗೆ ಜಮಖಂಡಿ ನಗರವೂ ಸೇರಿಸುವುದಕ್ಕೆ ಸಾಧ್ಯವೋ, ಹೇಗೆ ಎನ್ನುವ ಮಾತನ್ನು ಕೇಳಲಿಚ್ಛಿಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಜಮಖಂಡಿ ನಗರದ ಬಗ್ಗೆ ಇರುವ ಕಳಕಳಿ ಮತ್ತು ಆಸಕ್ತಿಯನ್ನು ಒಪ್ಪುತ್ತೇನೆ. ಈಗ 16 ಪಟ್ಟಣಗಳನ್ನು ಮೊದಲನೆಯ ಹಂತವಾಗಿ ತೆಗೆದು ಕೊಳ್ಳುತ್ತಿದ್ದೇವೆ, ಬರುವ ದಿವಸಗಳಲ್ಲಿ ಜಮಖಂಡಿ ನಗರವನ್ನು ಸೇರಿಸುವ ಬಗ್ಗೆ ಪರಿಶೀಲಿಸುತ್ತೇವೆ.

ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಸಬ್‌ಇನ್‌ಸ್ಪೆಕ್ಟರ್‌ಗಳ ನೇಮಕಾತಿ

22 (322) ಶ್ರೀ ವಿಶ್ವನಾಥ್, ಎಸ್.ಆರ್ (ಯಲಹಂಕ) : ಮಾನ್ಯ ಗೃಹ ಮತ್ತು ಮುಜರಾಯಿ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಈ ಹಿಂದಿನ ನೇಮಕಾತಿಯಲ್ಲಿ ಸೇವಾ ನಿರತ ಸಿಬ್ಬಂದಿಗಳಲ್ಲಿ ಎಷ್ಟು ಮಂದಿಗೆ ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ಹುದ್ದೆಗೆ ಸೇವಾಧಾರದ ಮೇಲೆ ನೇಮಕಾತಿ ಮಾಡಲಾಗಿದೆ?

ಇ) ಇಲಾಖೆಯಲ್ಲಿ ಪದವಿ ವಿದ್ಯಾರ್ಹತೆ ಹೊಂದಿ ಪೊಲೀಸ್ ಪೇದೆ ಮತ್ತು ಮುಖ್ಯ ಪೇದೆಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿದ್ದು, ಇವರಿಗೆ ಪ್ರತ್ಯೇಕ ನೇಮಕಾತಿ ಮೂಲಕ ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ಹುದ್ದೆಗೆ ನೇಮಕಾತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?